**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.</u>**

<u>ಸಿ.ಸಿ. ನಂ.20/2022</u>

CW-2/PW-5

| | | |
|---|---|---|
| ಹೆಸರು | : | ರಮೇಶ್ |
| ತಂದೆ ಹೆಸರು | : | ಲೇಟ್ ಯರಪ್ಪ |
| ವಯಸ್ಸು | : | 53 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ ಸ್ಥಳ | : | ಕೇತಗಾನಹಳ್ಳಿ, ಬಿಡದಿ. |
| ದಿನಾಂಕ | : | 11-06-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>

ಸಾಕ್ಷಿಗೆ ನಿಪಿ-2 ಮಹಜರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾಲ್ಕೈದು ವರ್ಷಗಳ ಹಿಂದೆ ದಿವ್ಯಾರವರ ಚಿನ್ನದ ಸರ ಕಳ್ಳತನವಾಗಿದ್ದ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದರು. ಪೊಲೀಸರಿಗೆ ಸ್ಥಳವನ್ನು ದಿವ್ಯಾರವರು ತೋರಿಸಿದರು. ಮಹಜರ್ ಕಾಲಕ್ಕೆ ನಾನು, ದಿವ್ಯಾ, ಶಿವಕುಮಾರ್ ಹಾಗೂ ಇನ್ನೂ ಸುಮಾರು ಜನ ಹಾಜರಿದ್ದೆವು. ಮಹಜರನ್ನು ರಾತ್ರಿ 8.00 ಗಂಟೆಯಿಂದ ಪ್ರಾರಂಭಿಸಿದರು. ಮಹಜರ್ ಕಾಲಕ್ಕೆ ಪೊಲೀಸರು ಫೋಟೋ ತೆಗೆದಿರಬಹುದು. ನಿಪಿ-4 ಫೋಟೋದಲ್ಲಿ ನಾನು ಸಹ ಇದ್ದೇನೆ.

<u>ಪಾಟೀ ಸವಾಲು ಆರೋಪಿ ಪರ ಕುಮಾರಿ.ಸಿ.ಕೆ.ಎನ್. ವಕೀಲರಿಂದ ಶ್ರೀ ಡಿ.ವಿ.ಎನ್., ವಕೀಲರ ಪರವಾಗಿ:-</u>

ನನ್ನದು ಕೇತಗಾನಹಳ್ಳಿ. ಮಹಜರ್ ಗೆ ಬನ್ನಿ ಎಂದು ಪೊಲೀಸರು ನನಗೆ ನೋಟಿಸ್ ಕೊಟ್ಟಿರಲಿಲ್ಲ. ಆ ದಿನ ನಾನು ಬಿಡದಿಯಿಂದ ನಮ್ಮ ಮನೆ ಕಡೆಗೆ ಹೋಗುತ್ತಿದ್ದೆ. ಪೊಲೀಸರು ಮಹಜರ್ ನಲ್ಲಿ ಏನು ಬರೆದುಕೊಂಡರು ಎಂದು

ಗೊತ್ತು. ಅದನ್ನು ನನಗೆ ಪೊಲೀಸರು ಓದಿ ಹೇಳಿದರು. ನಾನು ಮಹಜರ್ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-2ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿರಲಿಲ್ಲದಿದ್ದರೂ ಸಹ ಪೊಲೀಸರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಡದಿಯಿಂದ ನಮ್ಮ ಮನೆ ಕಡೆ ಒಬ್ಬನೇ ಹೋಗುತ್ತಿದ್ದೆ. ನಿಪಿ-2ರ ವಿಚಾರ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.